

ಪರ್ವತಶ್ರೇಣಿಗಳ ನಡುವೆ ರಿಲಾ ಮೊನಾಸ್ಟೆರಿ ಸೊಬಗು

ಚರಿತ್ರೆ ಎಂದು ಅವರು ದೊಡ್ಡ ಪಟ್ಟಿಯನ್ನೇ ನೀಡಲು ಆರಂಭಿಸಿದ್ದರು. ಆದರೆ ಜಾಗದ ಬಗ್ಗೆ ಹೇಳುವಾಗ ಧರ್ಮದ ವಿಚಾರಗಳಾಗಲೀ, ದೈವ ಸಂಬಂಧಿ ಕಟ್ಟುಪಾಡುಗಳನ್ನಾಗಲೀ ಬಣ್ಣಿಸಲಿಲ್ಲ. ಅವರ ವರ್ಣನೆಯಿಂದಲೇ, ಅದೊಂದು ಅಪೂರ್ವ ಸ್ಥಳ ಎಂಬುದಂತೂ ಮನದಟ್ಟಾಯಿತು.

ಮೊನಾಸ್ಟೆರಿ ಎಂದರೆ ಮಠ ಎನ್ನುವ ಅರ್ಥವಿದೆ. ಹಿಂದೂ, ಬೌದ್ಧ ಮಠಗಳ ಬಗ್ಗೆ ಕೇಳಿದ್ದೆ. ಕ್ರಿಶ್ಚಿಯನ್ನರ ಚರ್ಚು, ಕ್ಯಾಥೆಡ್ರಿಲ್ ಮತ್ತು ಆಶ್ರಮಗಳ ಬಗ್ಗೆ ತಿಳಿದಿದ್ದೆ. ಆದರೆ, ಮೊನಾಸ್ಟೆರಿ ಬಗ್ಗೆ ಹೆಚ್ಚು ತಿಳಿದಿರಲಿಲ್ಲ. ಈಗ ಅದು ಹೇಗಿರಬಹುದೆಂಬ ಕುತೂಹಲ ಬೆಳೆಯಿತು. ಇದೇ ಕುತೂಹಲ ಹೊತ್ತು ಬಲ್ಗೇರಿಯಾ ಕಡೆ ಸಾಗಿದ್ದೆ.

ಹಿಂದೂ ಧರ್ಮದಲ್ಲಿ ಸಾಧು–ಸಂತರ ಮಠಗಳಿದ್ದಂತೆ ಬಲ್ಗೇರಿಯಾದ ರಿಲಾದ ಸಂತ ಇವಾನನ ಮಠವನ್ನೇ 'ರಿಲಾ ಮೊನಾಸ್ಟೆರಿ' ಎಂದು ಕರೆಯುತ್ತಾರೆ. ಇದು ಪೂರ್ವ ಯೂರೋಪಿನ ಅತಿ ದೊಡ್ಡ ಮತ್ತು ಅತ್ಯಂತ ಪ್ರಸಿದ್ಧವಾದ ಸಾಂಪ್ರದಾಯಿಕ ಕ್ರೈಸ್ತ ಮಠ. ಅತ್ಯಂತ ಪುರಾತನವೂ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಮುಖ್ಯ ಮಠವೂ ಆದ ಕಾರಣ ಯುನೆಸ್ಕೋ ಇದನ್ನು 1983ರಲ್ಲಿ ಸಂರಕ್ಷಿತ ಜಾಗವೆಂದು ಘೋಷಿಸಿದೆ.

## ಪರ್ವತಶ್ರೇಣಿಗಳ ನಡುವೆ ಸುಂದರ ಮಠ

ರಿಲಾ ಎನ್ನುವ ಪರ್ವತ ಶ್ರೇಣಿಗಳ ನಡುವೆ, ರಿಲಾ ನದಿಯ ಕಣಿವೆಯ ಗರ್ಭದಲ್ಲಿ, ಅರಣ್ಯದ ನಡುವೆ ಅತ್ಯಂತ ಸುಂದರ ಸ್ಥಳದಲ್ಲಿ ಈ ಮಠ ನಿರ್ಮಾಣಗೊಂಡಿದೆ. ಇದನ್ನು ದೂರದಿಂದ ನೋಡಿದಾಗ ಪುಟ್ಟ ಕೋಟೆಯಂತೆ ಕಾಣುತ್ತದೆ. ಸುತ್ತಲೂ ಹಿಮಾವೃತ ಬೆಟ್ಟಗಳು, ಹಸುರು ಮರಗಳು, ಕೆಳಗೆ ತೇಲುತ್ತಿರುವ ಮೋಡಗಳ ನಡುವೆ ಅತ್ಯಂತ ಸದೃಢವಾಗಿರುವಂತೆ ಕಂಡುಬರುವ ಈ ಮೊನಾಸ್ಟೆರಿ ಕಣ್ಣಿಗೆ ಹಬ್ಬದಂತೆ. ಶಕ್ತಿ ಕೇಂದ್ರವಾಗಿ, ಸುರಕ್ಷಿತ ತಾಣವಾಗಿ, ಆಶ್ರಯ ನೀಡುವ ಜಾಗವಾಗಿ ಇದಕ್ಕೆ ಗಟ್ಟಿ ಚರಿತ್ರೆಯೂ ಇದೆ. ಸುಮಾರು ಅರವತ್ತು ಕ್ರೈಸ್ತ ಭಿಕ್ಷುಗಳಿಗೆ ಇಂದಿಗೂ ಆಶ್ರಯ ನೀಡಿದೆ.

ಹತ್ತನೇ ಶತಮಾನದಲ್ಲಿ ಶುರುವಾದ ಈ ಮಠ, ಬಲ್ಗೇರಿಯಾ ದೇಶದ ಅತ್ಯಂತ ಪ್ರಸಿದ್ಧ ಪ್ರವಾಸಿ ಸ್ಥಳ. ಪುರಾತನ ಕಟ್ಟಡ ಮತ್ತು ನಿರ್ಮಾಣದ ಶೈಲಿಯ ದೃಷ್ಟಿಯಿಂದಲೂ ಅಧ್ಯಯನಕ್ಕೆ ಒಳಪಡುವ ಕಟ್ಟಡ ಸಮುಚ್ಚಯ. ಪೂರ್ವ ಯೂರೋಪಿನ ದಕ್ಷಿಣ ದೇಶಗಳಲ್ಲಿ ಇದು ನಮ್ಮ ಕಾಶಿಗೆ ಸಮಾನವಾದುದು. ಜೊತೆಗೆ ಚಾರಿತ್ರಿಕವಾಗಿ ಮಹತ್ತರವಾದುದು. ಬಲ್ಗೇರಿಯಾ ದೇಶದ ಒಂದು 'ಲೆವ್'ನ (ಒಂದು ರೂಪಾಯಿಯ ನೋಟಿನಂಥದ್ದು) ಒಂದು ಬದಿಯಲ್ಲಿ ರಿಲಾ ಮೊನಾಸ್ಟೆರಿಯ ಚಿತ್ರವಿದೆ. ಪ್ರತಿವರ್ಷ ಲಕ್ಷಾಂತರ ಜನರು ಈ ಮೊನಾಸ್ಟೆರಿ ನೋಡಲೆಂದೇ ಬಲ್ಗೇರಿಯಾಗೆ ಬರುತ್ತಾರೆ.

'ಇವಾನ್' ಎಂಬ ಕ್ರೈಸ್ತ ಭಿಕ್ಷುವಿನಿಂದ ಶುರುವಾಯಿತು ಎನ್ನಲಾದ ಮಠಕ್ಕೆ ಇಂದಿಗೂ ಜನರು ನಡೆದುಕೊಳ್ಳುತ್ತಾರೆ. ಸಂತ ಇವಾನನು (ಕ್ರಿ.ಶ. 876–946) ಸರ್ವ ಸಂಗ ಪರಿತ್ಯಾಗಿಯಾಗಿ ಬೆಟ್ಟದ ಒಂದು ಗುಹೆಯಲ್ಲಿ ವಾಸಮಾಡುತ್ತಿದ್ದನಂತೆ. ಸಂತನಿಂದ ಆಧ್ಯಾತ್ಮಿಕ ಬೋಧನೆ ಪಡೆದುಕೊಳ್ಳಲು ಬಂದ ವಿದ್ಯಾರ್ಥಿಗಳು ಆತನ ಗುಹೆಗೆ ಹತ್ತಿರವಾಗಿ ಈ ಆಶ್ರಮ ಕಟ್ಟಲು